2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 111/2017

| | | |
|---|---|---|
| ಸಾಕ್ಷಿದಾರರ ಹೆಸರು | - ಶಿವರಾಜ್ ಯಾನೆ ಶಿವು | ಪಿಡಬ್ಲೂ -05 |
| ತಂದೆಯ ಹೆಸರು | - ಗಂಗಾಧರ | ಸಿಡಬ್ಲೂ -05 |
| ವಯಸ್ಸು | - 32 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಹೊಸಳ್ಳಿ, ಕಡೂರು ತಾ. | |

ದಿನಾಂಕಃ 26.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ನಮ್ಮ ಸಂಬಂಧಿಕರು. ಚಾಸಾ.2 ಚಿಕ್ಕಪ್ಪ, ಚಾಸಾ.1 ರವರು ಚಾಸಾ.2 ರವರ ಮಗಳು. ಚಾಸಾ.3 ಮತ್ತು 4 ಗೊತ್ತು. ಚಾಸಾ.8 ನನ್ನ ದೊಡ್ಡಪ್ಪ. ಚಾಸಾ.6 ಮತ್ತು 7 ನಮ್ಮ ಊರಿನವರು.

2. ಹೊಸಳ್ಳಿಯಲ್ಲಿ ನಮ್ಮ ಜಮೀನು ಇದ್ದು, ಮನೆಯಿಂದ 3-4 ಕಿಮೀ ದೂರದಲ್ಲಿದೆ. ಚಾಸಾ.2 ರವರ ಜಮೀನು ನಮ್ಮ ಮನೆಯ ಪಕ್ಕದಲ್ಲಿದೆ. ಆರೋಪಿತರು ವ್ಯವಸಾಯ ಮಾಡುತ್ತಾರೆ. ಆರೋಪಿತರ ಜಮೀನು ಸಹ ನಮ್ಮ ಮತ್ತು ಚಾಸಾ.2 ರವರ ಜಮೀನಿನ ಅಕ್ಕಪಕ್ಕದಲ್ಲಿಯೇ ಇದೆ. ಚಾಸಾ.2 ಹಾಗೂ ಆರೋಪಿತರ ಸಂಬಂಧ ಚೆನ್ನಾಗಿದೆ. ನನಗೆ ಈ ಪ್ರಕರಣ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಗಲಾಟೆ ಬಿಡಿಸಿಲ್ಲ. ನಾನು ಗಲಾಟೆ ನೋಡಿದ್ದೇನೆ ಎಂದು ಪೋಲೀಸರಲ್ಲಿ ಹೇಳಿಕ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

3. ದಿಃ 11.09.2016 ರಂದು ನಾನು ಕಡೂರು ಪೋಲೀಸ್ ಠಾಣೆಯಲ್ಲಿ ಪ್ರಕರಣದ ಕುರಿತು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 05.09.2016 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ನಮ್ಮ ತೋಟಕ್ಕೆ ಹೋಗಿದ್ದಾಗ ನಮ್ಮ ತೋಟದ ಪಕ್ಕದಲ್ಲಿರುವ ಚಾಸಾ.2 ಮತ್ತು ಆರೋಪಿ ತೋಟದಲ್ಲಿ ಅವರೆಲ್ಲರು ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಚಸಾಾ.2 ರವರ ತೋಟದಲ್ಲಿ ಆರೋಪಿತರು ಚಾಸಾ.2 ರವರ ತೋಟದ ಬಗ್ಗೆ ಆರೋಪಿತರಿಗೂ ಚಾಸಾ.2 ರವರಿಗೂ ಬದುವಿನ ವಿಚಾರದಲ್ಲಿ ಗಲಾಟೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನ ಸುಮಾರು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಚಾಸಾ.2 ರವರು ಮತ್ತು ಆರೋಪಿತರು ಚಾಸಾ.2 ರವರ ತೋಟದಲ್ಲಿ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದರೆ ಗೊತ್ತಿಲ್ಲ.

4. ಆಗ ನಾನು ಚಾಸಾ.3 ಮತ್ತು 4 ರವರು ಅಲ್ಲಿ ಹೋಗಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಚಾಸಾ.2 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ಕೊಡಲಿಯ ಹಿಂಬಾಗದಿಂದ ಚಾಸಾ.2 ರವರ ಎಡಕಾಲಿಗೆ ಹೊಡೆದನು ಎಂದರೆ ಗೊತ್ತಿಲ್ಲ. 2 ನೇ ಆರೋಪಿ ಚಾಸಾ.2 ರವರನ್ನು ಕೊಲೆಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ಕುಡುಗೋಲಿನ ಹಿಂಬಾಗದಿಂದ

ಚಾಸಾ.2 ರವರ ಕಾಲುಗಳಿಗೆ ಹೊಡೆದನು ಎಂದರೆ ಗೊತ್ತಿಲ್ಲ. ನಂತರ 1 ಮತ್ತು 2 ನೇ ಆರೋಪಿತರು ಚಾಸಾ.2 ರವರನ್ನು ಕಾಲಿನಿಂದ ತುಳಿದನು ಎಂದರೆ ಗೊತ್ತಿಲ್ಲ. 5 ನೇ ಆರೋಪಿ ಚಾಸಾ.2 ರವರನ್ನು ಕೊಲೆ ಮಾಡಿ ಎಂದು ಉಳಿದ ಆರೋಪಿತರಿಗೆ ಕುಮ್ಮಕ್ಕು ನೀಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಎಲ್ಲ ಆರೋಪಿತರು ಸೇರಿ ಚಾಸಾ.2 ರವರಿಗೆ ಇನ್ನೊಮ್ಮೆ ತೋಟದ ಬದುವಿನ ವಿಚಾರಕ್ಕೆ ಬಂದರೆ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದರು ಎಂದರೆ ಗೊತ್ತಿಲ್ಲ. ಆಗ ನಾನು, ಚಾಸಾ.3 ಮತ್ತು 4 ರವರು ಸೇರಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ನಂತರ ಚಾಸಾ.4 ರವರು ತಮ್ಮ ಬೈಕಿನಲ್ಲಿ ಚಾಸಾ.2 ರವರನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತಾರೆ ಎಂದು ಈಗ ಓದಿ ಹೇಳಿದ ನಿಪಿ.25 ರಂತೆ ತನಿಖಾಧಿಕಾರಿಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

5. ಆರೋಪಿತರು ನಮ್ಮ ಸಂಬಂಧಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರು ಹಾಜರಿದ್ದು ತಮ್ಮದೇನು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ